# ಓದುಗರ ಪ್ರತಿಕ್ರಿಯೆ

**ಅ**ಕ್ಟೋಬರ್ ೨೦೦೮ ರ **ವಿವೇಕಪ್ರಭ**ದಲ್ಲಿ ಪ್ರಕಟವಾದ ದೇವಿ ಸ್ಮರಣೆಯ ಲೇಖನವನ್ನು ಓದಿ ನನಗೆ ಬಹಳ ಸಂತೋಷವಾಯಿತು. ನಾನು ಸೌಂದರ್ಯಲಹರಿಯ ೨೨ ನೆಯ ಶ್ಲೋಕವನ್ನು ಓದಿದ್ದರೂ ಆಗ 'ಭವಾನಿ' ಎನ್ನುವುದು ಬರೀ ದೇವಿಯ ಒಂದು ಹೆಸರು ಎಂದು ತಿಳಿದಿದ್ದೆ. ಆದರೆ ಮಾನ್ಯ ಲೇಖಕರು ನೀಡಿದ ವಿವರಣೆ ಓದಿದ ಮೇಲೆ ತಾಯಿಯ(ದೇವಿಯ) ಮೇಲೆ ಒಂದು ಬಗೆಯ ಪೂರ್ಣ ವಿಶ್ವಾಸ ಮೂಡಿತು; ಹುಣ್ಣಿಮೆ ಚಂದ್ರನನ್ನು ನೋಡಿದಾಗ ಆಗುವ ಸಂತೋಷ, ಮನಃಶಾಂತಿ ಮತ್ತು ನೆಮ್ಮದಿಯ ಅನುಭವ ಆಯಿತು. ಇನ್ನು ಮುಂದೆಯೂ ಈ ಲೇಖಕರಿಂದ (ಶಿಕಾರಿಪುರ ಹರಿಹರೇಶ್ವರ) ಇಂತಹ ಹಲವು ಲೇಖನಗಳು ಮೂಡಿ ಬರಲಿ ಎಂದು ಆಶಿಸುತ್ತೇವೆ.

*– ಶಾರದ ಎಸ್. ಶಾಸ್ತ್ರೀ, ಮೈಸೂರು*

**ನಾ**ನು **ವಿವೇಕಪ್ರಭ** ಪತ್ರಿಕೆಯನ್ನು ೨೦೦೮ ರ ಸೆಪ್ಟೆಂಬರ್ ತಿಂಗಳಿನಿಂದ ಓದುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ಜಿಲ್ಲಾ ಮಟ್ಟದ ವಿಜ್ಞಾನ ಮೇಳವನ್ನು ಏರ್ಪಾಡು ಮಾಡಿದ್ದರು. ಅದರಲ್ಲಿ ನಡೆದ ಸ್ಪರ್ಧೆಯಲ್ಲಿ ಪ್ರಶ್ನೆಗಳಿಗೆ ಹೇಗೆ ಉತ್ತರ ಕೊಡಬೇಕು ಎಂದು ತಿಳಿದಿರಲಿಲ್ಲ. ಆಗ ಸೆಪ್ಟೆಂಬರ್ ತಿಂಗಳ ಸಂಚಿಕೆಯಲ್ಲಿದ್ದ 'ಓದುವ ವಿಧಾನ' ವನ್ನು ಚೆನ್ನಾಗಿ ನೋಡಿಕೊಂಡು ಅಲ್ಲಿಗೆ ಹೋದೆ. ವಿಜ್ಞಾನ ಮೇಳದಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದೆ. ನಾನು ಪ್ರಥಮ ಸ್ಥಾನ ಪಡೆಯಲು **ವಿವೇಕಪ್ರಭ**ವೇ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ.

*– ಸಾಗರ, ೫ ನೇ ತರಗತಿ, ಮುಧೋಳ*

**ಕೆ**ಲವು ವರ್ಷಗಳಿಂದ ನನ್ನ ಮನಸ್ಸಿಗೆ ಒಂದು ಕೊರತೆ ಕಾಡುತ್ತಿತ್ತು. ಭಾರತದ ಎಲ್ಲ ರಾಜ್ಯಗಳಿಂದಲೂ ಅಲ್ಲಿನ ಭಾಷೆಗಳಿಂದ ರಾಮಕೃಷ್ಣ ಮಹಾಸಂಘದ ಪತ್ರಿಕೆಗಳು ಹೊರಬರುತ್ತಿವೆ. ಆದರೆ ನಮ್ಮ ಕನ್ನಡ ಜನತೆ ಅದರಿಂದ ವಂಚಿತರಾಗುತ್ತಿದ್ದಾರೆ ಎಂದು. ಆಗ ನಾನು **ವಿವೇಕಪ್ರಭ**ದ ಮೊದಲ ಸಂಚಿಕೆ ನೋಡಿದಾಗ ನನ್ನ ಮನಸ್ಸಿಗೆ ಅದೆಷ್ಟು ಹರ್ಷ, ಹೆಮ್ಮೆ ಮತ್ತು ಹೃದಯಕ್ಕೆ ಅದೆಷ್ಟು ಆನಂದವಾಗಿತ್ತೆಂದರೆ, ಅದನ್ನು ಹೊರಪಡಿಸುವ ಭಾಷೆ ನನ್ನಲ್ಲಿ ಇರಲಿಲ್ಲ. ಆದುದರಿಂದ ಮೌನವಾಗಿ, ಹೃದಯಾಂತರಾಳದಿಂದ ಪತ್ರಿಕೆಗೆ ಕಾರಣರಾದ ಎಲ್ಲರಿಗೂ ಎಲ್ಲ ರೀತಿಯ ಶಕ್ತಿಯನ್ನೂ ಪ್ರೋತ್ಸಾಹವನ್ನೂ ನೀಡಲೆಂದು ಹಾಗೂ ಪತ್ರಿಕೆಯ ಸರ್ವತೋಮುಖವಾದ ಏಳಿಗೆಗೆ ಪ್ರಾರ್ಥಿಸಿದ್ದೆ. ಈಗಲೂ ಮತ್ತು ಮುಂದೆಯೂ ಸತತವಾಗಿ ಇದೇ ನನ್ನ ಪ್ರಾರ್ಥನೆ.

ಈಗ, ಬೆಂಗಳೂರಿಗೆ ಬಂದ ನಂತರ ಪತ್ರಿಕೆಯನ್ನು ಹೆಚ್ಚುಹೆಚ್ಚಾಗಿ ನೋಡುವ ಅವಕಾಶ ಸಿಕ್ಕಿದೆ. ನವೆಂಬರ್ ೨೦೦೮ ರ ಸಂಚಿಕೆಯಲ್ಲಿ ಎಲ್ಲ ಲೇಖನಗಳೂ, ವಿಶೇಷವಾಗಿ ಮಕ್ಕಳಿಗೆ ಅಥವಾ ಅವರ ಪೋಷಕರಿಗೆ ಸಂಬಂಧಪಟ್ಟವುಗಳಂತೂ ತುಂಬ ಉಪಯೋಗಕರ ಹಾಗೂ ಜೀವನಕ್ಕೆ ಮಾರ್ಗದರ್ಶಿ. ವಾರ್ತಾ ವಿಶ್ಲೇಷಣೆ 'ಮತಾಂತರ–ತತ್ತ್ವಾಂತರ' ಸಹ ತುಂಬ ಚೆನ್ನಾಗಿದೆ. ಸ್ವಾಮಿ ಅಶೋಕಾನಂದರ, 'ಧ್ಯಾನಕ್ಕೆ ಕುಳಿತುಕೊಳ್ಳುವ ಮುನ್ನ' ಮತ್ತು ಆ ರೀತಿಯ ಲೇಖನಗಳು ಆಧ್ಯಾತ್ಮಿಕ ಜೀವನ ನಡೆಸಬಯಸುವ ಎಲ್ಲ ಮುಮುಕ್ಷುಗಳಿಗೂ ಅತ್ಯಂತ ಉಪಯೋಗಕರವಾಗಿವೆ. ನಾನು ಇಲ್ಲಿ ವಾರಕ್ಕೊಮ್ಮೆ ಭಕ್ತ ಮಹಿಳೆಯರಿಗಾಗಿ ಮಾಡುತ್ತಿದ್ದ ತರಗತಿಗಳಲ್ಲಿ ಅದನ್ನು ಓದಿ, ಉದಾಹರಣೆಗಳೊಂದಿಗೆ ವಿವರಿಸಿ ಹೇಳಿದಾಗ ಅವರೆಲ್ಲಾ ಕೇಳಿ ತುಂಬಾ ಸಂತೋಷಪಟ್ಟರು; ಆಸಕ್ತಿ, ಉತ್ಸಾಹಗಳಿಂದ ಮತ್ತೆ ಮತ್ತೆ ಆ ವಿಚಾರಗಳನ್ನು ಕೇಳಲು ಇಚ್ಛೆಪಟ್ಟರು. ಹೀಗೆಯೇ ಡಿಸೆಂಬರ್ ೨೦೦೮ ರ ಸಂಚಿಕೆಯಲ್ಲಿ ಮಹಾಮಾತೆ ಶ್ರೀಶಾರದಾದೇವಿಯವರ ಬಗೆಗಿನ 'ಸಂಪಾದಕೀಯ' ಮತ್ತು ಇತರೆಲ್ಲಾ ಲೇಖನಗಳೂ ತುಂಬಾ ಚೆನ್ನಾಗಿವೆ.

*–ಪ್ರವ್ರಾಜಿಕಾ ಪ್ರಜ್ಞಾಪ್ರಾಣಾ, ಶ್ರೀಶಾರದಾ ಮಠ, ಬೆಂಗಳೂರು*

**ವಿವೇಕಪ್ರಭ** ಎಂದರೆ ವಿವೇಕದ ರಾಜ ಅಥವಾ ಪ್ರಭು ಇದ್ದಂತೆ. ಈ ಪತ್ರಿಕೆ ಅಮೃತಸುಧೆ ಇದ್ದಂತೆ. ಇದರ ಪ್ರತಿಯೊಂದು ಶೀರ್ಷಿಕೆಯಲ್ಲೂ ಭಕ್ತಿಭಾವ ತುಂಬಿದೆ. ಇದು ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯಗಳ ಆಗರವಾಗಿದೆ. ಪ್ರತಿಯೊಂದು ಶೀರ್ಷಿಕೆಯನ್ನು ಓದುವಾಗಲೂ ಸವಿಜೇನಿನ ಮಾಧುರ್ಯ ಬುಗ್ಗೆಯಾಗಿ ಚಿಮ್ಮುತ್ತದೆ. ಒಮ್ಮೆ ಓದಿದರೆ, ಮತ್ತೊಮ್ಮೆ ಓದುವ ಆಸೆ ಆಗುತ್ತದೆ.

**ವಿವೇಕಪ್ರಭ** ಪತ್ರಿಕೆ ಅತ್ಯುನ್ನತ ಮಟ್ಟದಲ್ಲಿದ್ದು, ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ಯೋಗಿಯಾಗಿ, ಧೀರನಾಗಿ, ಜ್ಞಾನಿಯಾಗಿ ಬಾಳುವ ಮತ್ತು ಪವಿತ್ರವಾದ ಜೀವನ ನಡೆಸುವ ವಿವೇಕದ ಪಾಠವನ್ನು ಕಲಿಸುತ್ತದೆ. ಸರಳ ಕನ್ನಡದಲ್ಲಿ ಎಲ್ಲರಿಗೂ ತಿಳಿಯುವಂತೆ, ಅರ್ಥಗರ್ಭಿತವಾದ, ಪೂಜ್ಯರ ಅನುಭವಸಾರವನ್ನು ಓದುವುದೇ ಒಂದು ಅಪೂರ್ವ ಅನುಭವ.

*– ಭೀಮಾಜಿ ಯಂಕಂಚಿ, ಬದಾಮಿ*

**ಮೀ**ನಾ ವಿ. ಅವರ 'ರಾಮಕೃಷ್ಣ ಮಹಾಸಂಘದ ಗುರು ಪರಂಪರೆ' ನನಗೆ ತುಂಬ ಮೆಚ್ಚುಗೆಯಾಯಿತು. ನಾನು ಬೆಂಗಳೂರಿನ ರಾಮಕೃಷ್ಣ ಆಶ್ರಮದ ಭಕ್ತಳು. ಗುರುಪರಂಪರೆಯ ಎಲ್ಲ ಅಧ್ಯಕ್ಷರ ವಿಷಯ ನನಗೆ ಸರಿಯಾಗಿ ಗೊತ್ತಿರಲಿಲ್ಲ. ಈ ಲೇಖನಮಾಲೆಯನ್ನು ಓದಿದ ಮೇಲೆ ತಿಳಿಯಿತು. ಸ್ವಾಮಿ ವೀರೇಶ್ವರಾನಂದಜಿ ಮಹಾರಾಜ್ ಅವರ ಸಹಿಷ್ಣುತೆ ಮತ್ತು ಕಾರ್ಯ ಚಟುವಟಿಕೆಗಳನ್ನು ನಿಭಾಯಿಸುವ ಕುಶಲತೆ ಅಮೋಘವಾದದ್ದು. ಹಾಗೆಯೇ ಸ್ವಾಮಿ ಗಂಭೀರಾನಂದರು ಅಮರನಾಥ ಲಿಂಗದಲ್ಲಿ ಶ್ರೀರಾಮಕೃಷ್ಣರ ದರ್ಶನವನ್ನು ಪಡೆದ ವಿಷಯವನ್ನು ಓದಿ ತುಂಬ ರೋಮಾಂಚನವಾಯಿತು. ಇಂತಹ ವಿಷಯಗಳನ್ನು ಪ್ರಕಟಿಸಿದುದಕ್ಕೆ ತುಂಬಾ ಧನ್ಯವಾದಗಳು.

*– ಪ್ರಮೀಳಾ ಶ್ರೀರಾಮುಲು, ಬೆಂಗಳೂರು*

ವಿವೇಕಪ್ರಭದ ಬಗ್ಗೆ ಓದುಗರಾದ ನಿಮ್ಮ ಪ್ರತಿಕ್ರಿಯೆಗಳನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇವೆ. ಬರಿಯ ಹೊಗಳಿಕೆ ಇರದೆ, ರಚನಾತ್ಮಕ ವಿಮರ್ಶೆ–ಟೀಕೆಗಳಿರುವ ಪತ್ರಗಳನ್ನು ಪತ್ರಿಕೆಯಲ್ಲಿ ಕಾಲಕಾಲಕ್ಕೆ ಪ್ರಕಟಿಸಲಾಗುವುದು. ಇಂಥ ಪತ್ರಗಳು ವಿಚಾರಮಂಥನಕ್ಕೆ ಮತ್ತು ಪತ್ರಿಕೆಯನ್ನು ಉತ್ತಮಪಡಿಸುವುದಕ್ಕೆ ಅವಕಾಶ ನೀಡುವಂತಿರಲಿ. –ಸಂ.